sdmimd

# Vijayavani

**Date:** 28-02-2017

Edition: Mysore

**Language: Kannada**

## ದಿನದ ಚಿತ್ರ




### ಸ್ಪೋರ್ಟ್ಸ್ ಟಾಕ್ ಉದ್ಘಾಟನೆ

ನಗರದ ಎಸ್‌ಡಿಎಂಐಎಂಡಿಯಲ್ಲಿ ಸೆಂಟರ್ ಫಾರ್ ಸ್ಪೋರ್ಟ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಆಶ್ರಯದಲ್ಲಿ ಸೆಂಟರ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಸ್ಪೋರ್ಟ್ಸ್ ಟಾಕ್' ಕಾರ್ಯಕ್ರಮವನ್ನು ಅತಿಥಿಗಳು ಉದ್ಘಾಟಿಸಿದರು. ಅಂತಾರಾಷ್ಟ್ರೀಯ ಟೆನಿಸ್ ಆಟಗಾರ ಸೋಮದೇವ್ ದೇವ ವರ್ಮನ್ ಹಾಗೂ ಮತ್ತಿತರರು ಇದ್ದಾರೆ.

## ಸುದ್ದಿ ಕಾರ್ನರ್

### ಸಾಧನೆಯತ್ತ ಚಿತ್ತ ಹರಿಸಿ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಕ್ರೀಡಾಪಟುಗಳು ಮೂಲಸೌಕರ್ಯದ ಕೊರತೆ ಸೇರಿದಂತೆ ಯಾವುದೇ ನೆಪ ಹೇಳದೆ ಸಾಧನೆ ಮಾಡುವತ್ತ ಚಿತ್ತ ಹರಿಸುವ ವ್ಯವಧಾನ ಬೆಳೆಸಿಕೊಳ್ಳಬೇಕು ಎಂದು ಅಂತಾರಾಷ್ಟ್ರೀಯ ಟೆನಿಸ್ ಆಟಗಾರ ಸೋಮದೇವ್ ದೇವವರ್ಮನ್ ಸಲಹೆ ನೀಡಿದರು. ನಗರದ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂಐಎಂಡಿಯಲ್ಲಿ ಸೆಂಟರ್ ಫಾರ್ ಸ್ಪೋರ್ಟ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಆಶ್ರಯದಲ್ಲಿ ಸೆಂಟರ್ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ 'ಸ್ಪೋರ್ಟ್ಸ್ ಟಾಕ್' ಕಾರ್ಯಕ್ರಮದಲ್ಲಿ ಮಾತನಾಡಿದರು. ಭಾರತೀಯರು ಸಾಮಾನ್ಯವಾಗಿ ಯಶಸ್ಸಿನ ಹಾದಿಯಲ್ಲಿ ಸಾಗುವ ಮುಂಚೆ ನೆಪ, ಮತ್ತೊಂದು ಅವಕಾಶದಂತ ಮಾತುಗಳನ್ನಾಡುತ್ತಾರೆ. ಆಫ್ರಿಕಾದ ಜನರು ಯಾವುದೇ ಮೂಲಸೌಕರ್ಯಗಳಿಲ್ಲದೆ ಯಶಸ್ಸು ಗಳಿಸುತ್ತಾರೆ. ಅವರಂತೆ ನಮಗೇಕೆ ಆಗುವುದಿಲ್ಲ? ನಾವು ನಮ್ಮ ಮನಸ್ಥಿತಿಯನ್ನು ಬದಲಿಸಿಕೊಳ್ಳಬೇಕು. ಇತ್ತೀಚಿನ ದಿನಗಳಲ್ಲಿ ಅಂತಹ ಬದಲಾವಣೆಗಳನ್ನು ನಮ್ಮ ದೇಶದಲ್ಲಿ ಕಾಣುತ್ತಿದ್ದೇವೆ ಎಂದರು. ಇದೇ ವೇಳೆ ಎಸ್‌ಡಿಎಂಐಎಂಡಿಯಲ್ಲಿ ಆರಂಭಿಸಲಾದ ಒಂದು ವರ್ಷದ 'ಪೋಸ್ಟ್ ಗ್ರಾಜ್ಯುಯೇಟ್ ಡಿಪ್ಲೊಮಾ ಇನ್ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್' ಹಾಗೂ 3 ವರ್ಷದ 'ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಕೋರ್ಸ್'ಗಳಿಗೆ ಟೆನಿಸ್ ಆಟಗಾರ ಸೋಮದೇವ್ ದೇವ ವರ್ಮನ್ ಅವರನ್ನು ರಾಯಭಾರಿಯನ್ನಾಗಿ ಘೋಷಿಸಲಾಯಿತು.

> ಕ್ರೀಡಾಪಟುಗಳಿಗೆ ಅಂತಾರಾಷ್ಟ್ರೀಯ ಟೆನಿಸ್ ಆಟಗಾರ ಸೋಮದೇವ್ ದೇವವರ್ಮನ್ ಸಲಹೆ

**Sports Management Course Inauguaration Program 2017**